(108)

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ. ನಾರಾಯಣಸ್ವಾಮಿ ರವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ

-------

ವಿಷಯ: ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರ್ಮಿಸಿರುವ "ಟೋಲ್ ಪ್ಲಾಜಾ" ಗಳಲ್ಲಿ ವಾಹನ ದಟ್ಟಣೆ ಸಾಮರ್ಥ್ಯ ನಿಭಾಯಿಸಲು ಮೂಲ ಸೌಕರ್ಯ ಇಲ್ಲದೆ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ಜೊತೆಗೆ ಕೆಲವು ಟೋಲ್ ಪ್ಲಾಜಾಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿದ್ದು ಮತ್ತು ಅವಧಿ ಮುಗಿದ ನಂತರವೂ ನಿಯಮ ಬಾಹಿರವಾಗಿ ಟೋಲ್ ಪ್ಲಾಜಾನಿಂದ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳ ಜೊತೆಗೆ ಉದ್ದೇಶಿತ ರಸ್ತೆಯ ಮೂಲ ಕರಾರುಗಳನ್ನು ಪೂರ್ಣಗೊಳಿಸದೆ ಟೋಲ್ ಅನ್ನು ವಸೂಲಿ ಮಾಡುತ್ತಿರುವ ಗಂಭೀರ ವಿಚಾರವನ್ನು ಸದನದಲ್ಲಿ ಸಭಾಪತಿಯವರ ಗಮನ ಸೆಳೆಯ ಬಯಸುತ್ತೇನೆ.

*******

<u>ಉತ್ತರ</u> : ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯ ವ್ಯಾಪ್ತಿಗೆ ಒಳಪಡುತ್ತದೆ.

- ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯವ್ಯಾಪ್ತಿಗೆ ಒಳಪಡುವ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ವಾಹನ ಸಾಂದ್ರತೆಯ ಅನುಸಾರ ಅಗತ್ಯ ಪಥಗಳನ್ನು ನಿರ್ಮಿಸಲಾಗಿದೆ. ಅಲ್ಲದೆ, ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ವಾಹನ ಬಳಕೆದಾರರ ಕಾಯುವ ಸಮಯವನ್ನು ತಗ್ಗಿಸಲು ಹಾಗೂ ಸುಗಮ ವಾಹನ ಸಂಚಾರಕ್ಕಾಗಿ ಫಾಸ್ಟ್ ಟ್ಯಾಗ್‌ಗಳನ್ನು ಅಳವಡಿಸಲಾಗಿದೆ. ಅದರಂತೆ, ಟೋಲ್ ಪ್ಲಾಜಾವನ್ನು ಪ್ರವೇಶಿಸುವ ವಾಹನಗಳಲ್ಲಿ ಮಾನ್ಯತೆ ಇರುವ ಫಾಸ್ಟ್ ಟ್ಯಾಗ್‌ನೊಂದಿಗೆ ಅವಶ್ಯವಿರುವಷ್ಟು ಹಣವಿದ್ದಲ್ಲಿ 10 ಸೆಕೆಂಡ್‌ಗಳಲ್ಲಿ ವಾಹನವು ಟೋಲನ್ನು ಹಾದು ಹೋಗಬಹುದಾಗಿರುತ್ತದೆ.
- ಅಲ್ಲದೆ, ಶೇ.100 ರಷ್ಟು ಫಾಸ್ಟ್ ಟ್ಯಾಗ್‌ಗಳನ್ನು ವಾಹನಗಳಿಗೆ ಅಳವಡಿಸಲು ಎಲ್ಲಾ ಟೋಲ್ ಪ್ಲಾಜಾಗಳಲ್ಲಿಯೂ ಪ್ರತಿ ಪಥಕ್ಕೆ ಮ್ಯಾಂಡೆಟ್ ಮಾರ್ಷಲ್‌ಗಳನ್ನು ನಿಯುಕ್ತಿಗೊಳಿಸಲಾಗಿರುತ್ತದೆ.
- ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ರವರ ಟೋಲ್ ಶುಲ್ಕ ಅಧಿಸೂಚನೆ 2008ರ ಮತ್ತು ಅಧಿಸೂಚನೆ ತಿದ್ದುಪಡಿ ದಿನಾಂಕ:06.10.2023ರ ಕ್ಲಾಸ್ 2(ಬಿ) ರನ್ವಯ ಎಲ್ಲಾ ಟೋಲ್ ಪ್ಲಾಜಾಗಳಲ್ಲಿಯೂ ನಿಗಧಿತ ಟೋಲ್ ಶುಲ್ಕ ವಸೂಲಾತಿ ಮಾಡಲಾಗುತ್ತಿದೆ. ಆದ್ದರಿಂದ ಯಾವುದೇ ಟೋಲ್‌ಗಳಲ್ಲಿಯೂ ಹೆಚ್ಚಿನ ಶುಲ್ಕವನ್ನು ವಸೂಲಾತಿ ಮಾಡುವುದಿಲ್ಲ.

ಅಧಿಸೂಚನೆ ತಿದ್ದುಪಡಿ ದಿನಾಂಕ: 06.10.2023ರ ಕ್ಲಾಸ್ 2(ಬಿ) ಈ ಕೆಳಕಂಡಂತಿದೆ.

"The fee as notified as per Concession Agreement shall be leviable till the end of the concession period and after the concession period is over, the fee shall be collected by the Central Government or the executing

..2

authority as per the fee specified in sub-rule (2) of rule 4 on the date of transfer of such section of the National Highway, bridge, tunnel or bypass, as the case may be, to be revised annually in accordance with these rules: Provided that in respect of a public funded project, the fee leviable shall continue to be collected in perpetuity for such section of the National Highway, bridge, tunnel or bypass, as the case may be, to be revised annually in accordance with these rules".

ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಗುತ್ತಿಗೆ ಕರಾರಿನಲ್ಲಿರುವ ಷರತ್ತುಗಳನ್ನು ಪೂರೈಸಿದ ನಂತರವೇ ಶುಲ್ಕ ವಸೂಲಾತಿ ಮಾಡಲಾಗುತ್ತಿರುತ್ತದೆ.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸಂಖ್ಯೆ: ಲೋಇ 248 ಸಿಎನ್‌ಹೆಚ್ 2023 (ಇ)